ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE :

# ಧರ್ಮೇಗೌಡ ಸಾವು: ಎಮ್ಮೆಲ್ಸಿಗಳ ವಿಚಾರಣೆ?

## ಡಿಸಿಎಂ, ಸಚಿವರು, ಮೇಲ್ಮನೆ ಸದಸ್ಯರ ವಿಚಾರಣೆಗೆ ಆರ್‌ಪಿಎಫ್ ಸಿದ್ಧತೆ । ಗದ್ದಲದ ಮಾಹಿತಿಗಾಗಿ ಕಾರ್ಯದರ್ಶಿಗೆ ಪತ್ರ

• ಗಿರೀಶ್ ಮಾದೇನಹಳ್ಳಿ
**ಕನ್ನಡಪ್ರಭ ವಾರ್ತೆ** ಬೆಂಗಳೂರು

ವಿಧಾನಪರಿಷತ್ ಉಪಸಭಾಪತಿ ದಿ.ಎಸ್.ಎಲ್. ಧರ್ಮೇಗೌಡ ಆತ್ಮಹತ್ಯೆಗೆ ಪರಿಷತ್‌ನಲ್ಲಿ ನಡೆದಿದ್ದ ಗಲಾಟೆ ಕಾರಣ ಎಂಬ ಮರಣ ಪತ್ರದಲ್ಲಿನ ಉಲ್ಲೇಖದ ಹಿನ್ನೆಲೆಯಲ್ಲಿ ಉಪ ಮುಖ್ಯಮಂತ್ರಿಗಳು, ಸಚಿವರು ಹಾಗೂ ವಿಧಾನಪರಿಷತ್ ಸದಸ್ಯರನ್ನು ವಿಚಾರಣೆಗೊಳಪಡಿಸಲು ರೈಲ್ವೆ ಪೊಲೀಸರು ಮುಂದಾಗಿದ್ದಾರೆ.



2020ರ ಡಿಸೆಂಬರ್ 15ರಂದು ವಿಧಾನಪರಿಷತ್‌ನಲ್ಲಿ ನಡೆದ ಗದ್ದಲದ ಸಮಗ್ರ ಮಾಹಿತಿ ನೀಡುವಂತೆ ಕೋರಿ ವಿಧಾನಪರಿಷತ್‌ನ ಕಾರ್ಯದರ್ಶಿ ಮಹಾಲಕ್ಷ್ಮೀ ಅವರಿಗೆ ರೈಲ್ವೆ ಪೊಲೀಸರು ಪತ್ರ ಬರೆದಿದ್ದಾರೆ. ಪರಿಷತ್ ಕಾರ್ಯದರ್ಶಿಗಳ ಮಾಹಿತಿ ಆಧರಿಸಿ ಅಂದು ಪರಿಷತ್ ಕಲಾಪದಲ್ಲಿ ಹಾಜರಾಗಿದ್ದ ಉಪ ಮುಖ್ಯಮಂತ್ರಿಗಳು, ಸಚಿವರು, ಪರಿಷತ್ ಸದಸ್ಯರ ವಿಚಾರಣೆ ನಡೆಯಲಿದೆ ಎಂದು ಗೃಹ ಇಲಾಖೆ ಉನ್ನತ ಮೂಲಗಳು 'ಕನ್ನಡಪ್ರಭ'ಕ್ಕೆ ತಿಳಿಸಿವೆ.

ಸಾವಿಗೂ ಮುನ್ನ ಧರ್ಮೇಗೌಡ ಅವರು ಬರೆದಿದ್ದಾರೆ ಎನ್ನಲಾದ 2 ಪುಟಗಳ ಮರಣ ಪತ್ರದಲ್ಲಿ ಡಿ.15ರಂದು ಪರಿಷತ್ ಕಲಾಪದಲ್ಲಿ ನಡೆದಿದ್ದ ಘರ್ಷಣೆ ತಮ್ಮ ಮನಸ್ಸಿಗೆ ತುಂಬಾ ಆಘಾತ ಉಂಟುಮಾಡಿತು. ಈ ನೋವಿನಿಂದ ನಾನು ಹೊರಬರಲಾಗದೆ ಆತ್ಮಹತ್ಯೆ ಮಾಡಿಕೊಳ್ಳುವ ತೀರ್ಮಾನಕ್ಕೆ ಬಂದಿದ್ದೇನೆ ಎಂದು 2 ಬಾರಿ ಉಲ್ಲೇಖಿಸಿದ್ದಾರೆ. ಮರಣ ಪತ್ರದಲ್ಲಿ ಉಲ್ಲೇಖವಾಗಿರುವ ಕಾರಣಕ್ಕೆ ಆರೋಪವನ್ನು ಲಘುವಾಗಿ ಪರಿಗಣಿಸಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಕಲಾಪದಲ್ಲಿ ಹಾಜರಿದ್ದ ಎಲ್ಲರಿಂದಲೂ ವಿವರಣೆ ಅಗತ್ಯವಿದೆ. ಹೀಗಾಗಿ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಿ ಅಧಿಕೃತವಾಗಿಯೇ ಹೇಳಿಕೆ ಪಡೆಯಲಾಗುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

**ಸಚಿವರು, ಶಾಸಕರ ವಿಚಾರಣೆ:** ಈಗಾಗಲೇ ಪ್ರಕರಣದ ಸಂಬಂಧ ಧರ್ಮೇಗೌಡ ಅವರ ಪತ್ನಿ, ಮಕ್ಕಳು, ಸ್ನೇಹಿತರು ಹಾಗೂ ಸಿಬ್ಬಂದಿ ವಿಚಾರಣೆ ನಡೆಸಿ ಹೇಳಿಕೆ ಪಡೆಯಲಾಗಿದೆ. ಪರಿಷತ್ ಕಲಾಪದ ಬಗ್ಗೆ ವಿಧಾನಪರಿಷತ್ ಕಾರ್ಯದರ್ಶಿ ನೀಡುವ ಮಾಹಿತಿ ಆಧರಿಸಿ ಮುಂದಿನ ತನಿಖೆ ನಡೆಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### 120 ಎಕರೆ ಜಮೀನು ವಿಚಾರ ಪ್ರಸ್ತಾಪ

ಚಿಕ್ಕಮಗಳೂರು ಜಿಲ್ಲೆಯಲ್ಲಿರುವ 120 ಎಕರೆ ಜಮೀನು ಹಾಗೂ ಬೆಂಗಳೂರು ಮನೆ ಸೇರಿ ಇತರೆಡೆ ಆಸ್ತಿ ವಿಚಾರವನ್ನು ಆತ್ಮಹತ್ಯೆಗೂ ಮುನ್ನ ಧರ್ಮೇಗೌಡ ಬರೆದಿರುವ ಮರಣಪತ್ರದಲ್ಲಿ ಪ್ರಸ್ತಾಪಿಸಿದ್ದಾರೆ. ಮಕ್ಕಳಿಗೆ ಯಾವ್ಯಾವ ಆಸ್ತಿ ಸಿಗಬೇಕೆಂದು ಉಲ್ಲೇಖಿಸಿದ್ದಾರೆ. ಅಲ್ಲದೆ, ಕುಟುಂಬದ ಕ್ಷೇಮದ ಜವಾಬ್ದಾರಿಯನ್ನು ಸೋದರ, ವಿಧಾನಪರಿಷತ್ ಸದಸ್ಯ ಎಸ್.ಎಲ್.ಭೋಜೇಗೌಡ ನೋಡಿಕೊಳ್ಳಬೇಕು ಎಂದು ಮನವಿ ಮಾಡಿದ್ದಾರೆ ಎನ್ನಲಾಗಿದೆ.